ಕಾಲೇಜುಗಳಲ್ಲಿ ಕಡ್ಡಾಯವಾಗಿ ಸೇವೆ ಮಾಡಲು ಕಳುಹಿಸುವಂಥಾದ್ದಕ್ಕೆ ತಾವು ಏನಾದರೂ ಕಾನೂನಿನ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು:- ಮಾನ್ಯ ಗೋವಿಂದೇಗೌಡರೇ, ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯವಾಗಿ ಉಪನ್ಯಾಸಕರು ಕೆಲಸ ಮಾಡಲು ಏನಾದರೂ ನಿರ್ಬಂಧ ಮಾಡುತ್ತಿರೋ? ಇವತ್ತು ಎಲ್ಲಾ ಡಾಕ್ಟರ್‌ಗಳು ಟೀಚರ್ಸ್‌ಗಳು ಇವರದೆಲ್ಲಾ ಇದೇ ಸಮಸ್ಯೆಯಾಗಿದೆ. ಸೆಲೆಕ್ಷನ್ ಆದನಂತರ ಇವರೆಲ್ಲರೂ ಎಲ್. ಹೆಚ್.ಗೆ ಬರುತ್ತಾರೆ.

ಶ್ರೀ ಹೆಚ್.ಜಿ ಗೋವಿಂದೇಗೌಡ:- ಈಗ ಉಪನ್ಯಾಸಕರನ್ನು ಏನು ನೇಮಕ ಮಾಡಿದ್ದೇವೆ, ಅವರಲ್ಲಿ ನೂರಕ್ಕೆ ನೂರರಷ್ಟು ಹಳ್ಳಿಗಳಿಗೆ ಹೋಗಬೇಕೆಂದು ಕಡ್ಡಾಯವಾಗಿ ಎಲ್ಲಾ ಹಳ್ಳಿಗಳಿಗೆ ಕಳುಹಿಸಿದ್ದೇವೆ. ಈಗಲೂ ಸಹ ಹಳ್ಳಿಗಳಲ್ಲಿರುವಂತಹ ಶಾಲೆಗಳಿಗೆ ಮಾನ್ಯ ಸದಸ್ಯರು ಹೇಳಿದಂತೆ ಉಪಧ್ಯಾಯರುಗಳನ್ನು ಏನು ನೇಮಕ ಮಾಡುತ್ತಿದ್ದೇವೆ, ಅವರೆಲ್ಲರೂ ಹಳ್ಳಿಗಳಲ್ಲಿ ಕೆಲಸ ಮಾಡಬೇಕು.

ಅಧ್ಯಕ್ಷರು:- ನಾನು, if it is not out of the way, ತಮಗೆ ಏನು ಸಜೆಷನ್ ಮಾಡುತ್ತೇನೆಂದರೆ ಪಿ.ಎಸ್.ಸಿ.ಯವರ ಕಡೆಯಿಂದ ವೈಟಿಂಗ್ ಲಿಸ್ಟ್ ಅನ್ನು ತೆಗೆದುಕೊಂಡು ಇಟ್ಟುಕೊಳ್ಳಿ. ಆರ್ಡ್‌ರ್ಸಗಳನ್ನು ತೆಗೆದುಕೊಂಡು ಎಲ್.ಹೆಚ್.ಗೆ ಬಂದು ಅಲ್ಲಿ ಹಾಕಿಸಿ, ಇಲ್ಲಿ ಹಾಕಿಸಿ ಎಂದು ಓಡಾಡುವಂತಹರಿಗೆ 8–10 ದಿವಸಗಳು ಟೈಮ್ ಕೊಡಿ, ಈ ಡೇಟ್‌ನಲ್ಲಿ ರಿಪೋರ್ಟ್ ಮಾಡಿಕೊಳ್ಳದಿದ್ದರೆ ಅವರ ಹೆಸರನ್ನು ತೆಗೆದುಹಾಕಿ; ವೈಟಿಂಗ್ ಲಿಸ್ಟ್‌ನಲ್ಲಿ ಇರುವವರಿಗೆ ಆರ್ಡ್‌ರ್ಸ್ ಕೊಡಿ ಆ ರೀತಿ ಮಾಡುವುದರಿಂದ ಎಲ್.ಹೆಚ್.ಗೆ ಬರುವುದನ್ನು ತಪ್ಪಿಸಿದ ಹಾಗೆ ಆಗುತ್ತದೆ, ಮತ್ತು ಸದಸ್ಯರುಗಳೂ ಕೂಡ ನೆಮ್ಮದಿಯಿಂದ ಬದುಕಬಹುದು.

ಶ್ರೀ ಸಿ. ಚೆನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ತ್ಯಾಮಗೊಂಡ್ಲು ಗೌವರ್ನ್‌ಮೆಂಟ್ ಕಾಲೇಜಿನಲ್ಲಿ ಎರಡು ವರ್ಷಗಳಿಂದ ಇಂಗ್ಲೀಷ್ ಲೆಕ್ಚರರ್ ಇಲ್ಲ. ಮಾನ್ಯ ಮಂತ್ರಿಯವರು ಆ ಕಾಲೇಜಿಗೆ ಇಂಗ್ಲೀಷ್ ಲೆಕ್ಚರರ್ ಅನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಪಬ್ಲಿಕ್ ಸರ್ವಿಸ್ ಕಮೀಷನ್‌ನಿಂದ ಬಂದ ನಂತರ ತಕ್ಷಣ ಮಾಡಿಸಿ ಕೊಡುತ್ತೇನೆ.

ವಿಷಯ:- ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು.

341(1914) **ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಟ್ಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡಲು ಬೇಕಾದ ಅನುಕೂಲಗಳಿರುವುದು ನಿಜವಲ್ಲವೇ?

ಆ) ಹಾಗಾದರೆ ಆದನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡಲು ಸರ್ಕಾರದವರು ಕ್ರಮ-ಕೈಗೊಳ್ಳುವರೇ?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಬಂಟ್ವಾಳ ತಾಲ್ಲೂಕಿನಲ್ಲಿ ಈಗಾಗಲೇ 2 ಸಮುದಾಯ ಆರೋಗ್ಯ ಕೇಂದ್ರಗಳಿರುವುದರಿಂದ ಮತ್ತೊಂದು ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಪ್ರಕಾರ ಪರಿಗಣಿಸಲು ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಾನ್ಯ ಅಧ್ಯಕ್ಷರೇ, ವಿಟ್ಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡಲು ನಾನು ಪ್ರಶ್ನೆಯನ್ನು ಕೇಳಿದ್ದೆ. ತಾವು ಬಂಟ್ವಾಳ ತಾಲ್ಲೂಕಿನಲ್ಲಿ ಈಗಾಗಲೇ 2 ಸಮುದಾಯ ಆರೋಗ್ಯ ಕೇಂದ್ರಗಳು ಇವೆ ಎಂದು ಉತ್ತರವನ್ನು ನೀಡಿದ್ದೀರಿ. ಮತ್ತು ಇದಕ್ಕೆ ಮಾರ್ಗಸೂಚಿ ಪ್ರಕಾರ ಪರಿಗಣಿಸಲು ಬರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದೀರಿ. ಆದರ ಪ್ರಕಾರ ಸಮುದಾಯ ಆಸ್ಪತ್ರೆಯನ್ನು ಮಾಡಬೇಕಾದರೆ ಮಾರ್ಗಸೂಚಿ ಏನು? ನಮ್ಮ ಬಂಟ್ವಾಳ ತಾಲ್ಲೂಕಿನಲ್ಲಿ ಮೂರು ವಿಭಾಗವಿದೆ. ಬಂಟ್ವಾಳ ಪಿರ್ಕಾ, ಬಾಣ ಮಂಗಳೂರು ಪಿರ್ಕಾ, ವಿಟ್ಲಾ ಪಿರ್ಕಾ ಎಂದು ಇದೆ. ನೀವು ಕೊಡತಕ್ಕ ಎರಡು ಆಸ್ಪತ್ರೆಗಳು ತಾಲ್ಲೂಕಿನ ಒಂದೇ ಕಡೆಯಲ್ಲಿ ಬರುತ್ತದೆ. ಆದರೆ ನಮ್ಮಲ್ಲಿ ಬಂಟ್ವಾಳ ತಾಲ್ಲೂಕಿನ ವಿಟ್ಲಾ ಕ್ಷೇತ್ರ ದೊಡ್ಡ ಪೇಟೆ ಮತ್ತು ಅದರ ಆಸು-ಪಾಸಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅಲ್ಲಿ ವಾಸ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಅದು ಗಡಿಪ್ರದೇಶದಲ್ಲಿ ಇದೆ. ಜನಸಂಖ್ಯೆ ಕೂಡ ಜಾಸ್ತಿ ಇದೆ. ಆದುದರಿಂದ ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರ ನೀಡಬೇಕೆಂದು ಕೇಳುತ್ತೇನೆ.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ ತಾಲ್ಲೂಕಿನಲ್ಲಿ ಎರಡು ಲಕ್ಷದ ಎಂಭತ್ತೊಂಭತ್ತು ಸಾವಿರ ಜನಸಂಖ್ಯೆ ಇದೆ. ಒಂದು ಲಕ್ಷದ 25 ಸಾವಿರ ಜನಸಂಖ್ಯೆಗೆ ಒಂದು ಸಮುದಾಯ ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕು. ಈಗಾಗಲೇ ಆ ತಾಲ್ಲೂಕಿನಲ್ಲಿ ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿವೆ. ಮಾನ್ಯ ಸದಸ್ಯರ ವಿಟ್ಲ ವಿಧಾನಸಭಾ ಕ್ಷೇತ್ರ ಕೂಡ ಹೆಡ್ ಕ್ವಾರ್ಟರ್ಸ್ ಎಂದು ತಿಳಿದುಕೊಂಡಿದ್ದೇನೆ. ಈಗಾಗಲೇ ಇದನ್ನು ನಿಯಮದ ಪ್ರಕಾರ ಕೊಡುವುದಕ್ಕೆ ಸಾಧ್ಯತೆ ಇಲ್ಲದಿದ್ದರೂ ಕೂಡ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಇದು ಪರಿಶೀಲನೆಯ ಪ್ರಶ್ನೆಯಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ:- ಮಂತ್ರಿಗಳ ಮಗ ಅಲ್ಲೇ ಓದುತ್ತಿದ್ದಾರೆ. ಅದಕ್ಕಾಗಿ ಸ್ವಲ್ಪ ಗಂಭೀರವಾಗಿ ಪರಿಶೀಲನೆ ಮಾಡಿ.

ಅಧ್ಯಕ್ಷರು:- ಹಾಗಾದರೆ ಆಗುತ್ತದೆ ಬಿಡಿ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಎರಡು ಆಸ್ಪತ್ರೆಗಳು ಒಂದೇ ಕಡೆ ಬರುತ್ತದೆ.

ವಿಷಯ:- ಮುಧೋಳದ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

346 (2246) **ಶ್ರೀ ಗೋವಿಂದ ಕಾರಟೋಳ (ಮುಧೋಳ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಧೋಳ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು 100 ಹಾಸಿಗೆಗೆ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಎಷ್ಟು ದಿನಗಳಲ್ಲಿ ಹಾಸಿಗೆಗಳನ್ನು ಹೆಚ್ಚಿಸಲಾಗುವುದು?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಗೋವಿಂದ ಮತ್ತಪ್ಪ ಕಾರಜೋಳ:- ನಾನು ಕೇಳಿದ್ದು ನಾಲ್ಕು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವಂತಹ ಒಂದು ತಾಲ್ಲೂಕಿನಲ್ಲಿ 100 ಹಾಸಿಗೆ ಉಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಬೇಕೆಂದು ಕೇಳಿದ್ದೇನೆ. ಅದಕ್ಕೆ ತಾವು ಆಗುವುದಿಲ್ಲವೆನ್ನುವ ಉತ್ತರವನ್ನು ಕೊಟ್ಟಿರುವುದು ಸಮಂಜಸವಲ್ಲವೆಂಬುದು ನನ್ನ ಭಾವನೆಯಾಗಿದೆ. ದಯವಿಟ್ಟು ಸರ್ಕಾರ ಮುಧೋಳ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂಬುದು ನನ್ನ ಕಳಕಳಿಯ ಮನವಿಯಾಗಿದೆ.

ಅಧ್ಯಕ್ಷರು:- ಮುಧೋಳದಲ್ಲೂ ನಾಲ್ಕು ಲಕ್ಷ ಜನಸಂಖ್ಯೆ ಇದೆಯೋ?

ಶ್ರೀ ಗೋವಿಂದ ಮತ್ತಪ್ಪ ಕಾರಜೋಳ:- ಇಲ್ಲ ಮುಧೋಳ ತಾಲ್ಲೂಕಿನಲ್ಲಿ 56,000ಕ್ಕಿಂತ ಸ್ವಲ್ಪ ಹೆಚ್ಚು ಜನ ಇದ್ದಾರೆ.

ಡಾ।। ಹೆಚ್.ಸಿ. ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ಈಗಾಗಲೆ ಮುಧೋಳದಲ್ಲಿ 30 ಹಾಸಿಗೆಗಳು ಇರುವಂತಹ ಆಸ್ಪತ್ರೆ ಇದೆ. ಇದನ್ನು ಜರ್ಮನ್ ಯೋಜನೆಯ ಅಡಿಯಲ್ಲಿ ಹೆಚ್ಚುವರಿ ಸಿಬ್ಬಂದಿ, ಸಲಕರಣೆಗಳು, ಮತ್ತು ದುರಸ್ತಿ ಇವುಗಳನ್ನು ಸೇರಿಸಿಕೊಂಡಿದ್ದೇವೆ. ಹೀಗಾಗಿ ಆಸ್ಪತ್ರೆ ಸುಧಾರಣೆಯಾಗುತ್ತಿದೆ ಎಂದಾಗಲಿ ಅಥವಾ ಮಾನ್ಯ ಸದಸ್ಯರ ಭಾವನೆಗಳಿಗೆ ಉತ್ತರವನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದರೂ ಕೂಡ ಈಗ ಸುಸಜ್ಜಿತ ಆಸ್ಪತ್ರೆಯನ್ನು ಮಾಡುವುದಕ್ಕೆ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ. ಹೆಚ್ಚು ಹಾಸಿಗೆಗೆ ಹೆಚ್ಚಿಸಲು ಮತ್ತು ಮೇಲ್ದರ್ಜೆಗೆ ಏರಿಸಲು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆನ್ನುವುದನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಗೋವಿಂದ ಮತ್ತಪ್ಪ ಕಾರಜೋಳ:- ಮಾನ್ಯ ಅಧ್ಯಕ್ಷರೇ, ಸದ್ಯಕ್ಕೆ ಸಾಧ್ಯವಿಲ್ಲವೆಂದರೆ, ಸರ್ಕಾರ ಎಷ್ಟು ದಿವಸಗಳಲ್ಲಿ ಮಾಡಲು ಸಾಧ್ಯವಿದೆ, ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

12.10 ಪಿ.ಎಂ

ಅಧ್ಯಕ್ಷರು:- ಎಷ್ಟು ದಿವಸಗಳಲ್ಲಿ ಸಾಧ್ಯವಾಗುತ್ತದೆಂದು ಕೇಳುತ್ತಿದ್ದಾರೆ, ಆಲೋಚನೆ ಮಾಡಿ ಹೇಳ್ತೀನಿ.

ಡಾ।। ಹೆಚ್.ಸಿ. ಮಹದೇವಪ್ಪ:- ಈಗಾಗಲೇ ನಾನು, ಜರ್ಮನ್ ಪ್ರಾಜೆಕ್ಟ್ ಯೋಜನೆಯಡಿಯಲ್ಲಿ ಇದರ ದುರಸ್ತಿ ಸಲಕರಣೆಗಳು ಮತ್ತು ಸಿಬ್ಬಂದಿಗಳನ್ನು ಕೊಡುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ ಎಂದು ಹೇಳಿದ್ದೇನೆ. ಸುಮ್ಮನೆ ಒಂದು ಆಸ್ಪತ್ರೆಯನ್ನು ಸ್ಥಾಪನೆ ಮಾಡಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಕಾಗದದ ಮೇಲೆ ಆಜ್ಞೆಯನ್ನು ಮಾಡಿ, ಅದಕ್ಕೆ ಪೂರಕವಾದ ಸಿಬ್ಬಂದಿ ಮತ್ತು ಇತರೆ ಸಲಕರಣೆಗಳನ್ನು ಕೊಡದೇ ಇದ್ದರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಸೂಕ್ತ ಸಮಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಸೂಕ್ತ ಸಮಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ.

ವಿಷಯ:- ಬಾದಾಮಿ ಮತಕ್ಷೇತ್ರದಲ್ಲಿ ಅಪೂರ್ಣವಾಗಿರುವ ಕುಡಿಯುವ ನೀರಿನ ಯೋಜನೆಗಳು.

343 (2069) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾದಾಮಿ ಮತಕ್ಷೇತ್ರದಲ್ಲಿ ಅಪೂರ್ಣಗೊಳಿಸಿರುವ ಕಿರುನೀರು ಸರಬರಾಜು ಯೋಜನೆ ಎ.ಆರ್.ಡಬ್ಲ್ಯು.ಎಸ್.; ಎನ್.ಆರ್.ಡಬ್ಲ್ಯು.ಎಸ್. ರಾಜ್ಯ ಹಾಗೂ ಕೇಂದ್ರ ಯೋಜನೆಗಳು ಯಾವುವು?

ಆ) ಇವುಗಳಲ್ಲಿ ಯಾವ ಯಾವ ಸಾಲಿನಲ್ಲಿ ಮಂಜೂರಾತಿಯನ್ನು ನೀಡಲಾಗಿದೆ ಮತ್ತು ಈಗಾಗಲೇ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ವಿವರವನ್ನು ಒದಗಿಸುವುದು?

ಇ) ಕುಡಿಯುವ ನೀರು ಸರಬರಾಜು ಯೋಜನೆಗೆ ತೀವ್ರ ಅಭಾವವಿದ್ದಾಗ್ಯೂ ಯೋಜನೆಗಳನ್ನು ಪೂರ್ಣಗೊಳಿಸದಿರಲು ಕಾರಣವೇನು? ಯಾವ ಅವಧಿಯಲ್ಲಿ ನಿರ್ದಿಷ್ಟವಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):-

ಅ) ಯೋಜನೆಗಳ ವಿವರವನ್ನು ಅನುಬಂಧ–'ಅ'ನಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–'ಆ'ನ ಕಲಂ 3 ಹಾಗೂ 5ರಲ್ಲಿ ನೀಡಲಾಗಿದೆ.

ಇ) ಯೋಜನೆಗಳನ್ನು ಅನುಷ್ಠಾನಗೊಳಿಸಲು ವಿಳಂಬವಾಗಿರುವ ಕಾಮಗಾರಿಗಳ ವಾಸ್ತವಿಕತೆಯನ್ನು ಅನುಬಂಧ–'ಆ'ನಲ್ಲಿರುವ ಕಲಂ 6ರಲ್ಲಿ ನೀಡಲಾಗಿದೆ.

ಅನುಬಂಧ–'ಅ' (ರೂ. ಲಕ್ಷಗಳಲ್ಲಿ)

ಯೋಜನೆಗಳು	ಯೋಜನೆಗಳ ಸಂಖ್ಯೆ	ಮಂಜೂರಾದ ವರ್ಷ	ಅಂದಾಜು ಮೊತ್ತ	6:96ರವರೆಗೆ ಖರ್ಚಾದ ಹಣ	ಯೋಜನೆಯ ವಾಸ್ತವಿಕತೆ
ಅಪೂರ್ಣಗೊಂಡಿರುವ ನೀರು ಸರಬರಾಜು ಯೋಜನೆಗಳ ವಿವರ: (ಬಾದಾಮಿ ಮತಕ್ಷೇತ್ರ)					
1) ಎನ್.ಆರ್.ಡಬ್ಲ್ಯು.ಎಸ್. (ರಾಜ್ಯ)					
1. ಬೆಳವಲಕೊಪ್ಪ	1	1994-95	2.40	1.75	ಈ ಯೋಜನೆಗೆ ಜಲಮೂಲದ ಸ್ಥಳ 3:96ರ ತಿಂಗಳಲ್ಲಿ ಆಯ್ಕೆಯಾಗಿದ್ದು ಯಾಂತ್ರಿಕ ಉಪವಿಭಾಗ, ಬಾಗಲಕೋಟೆ ಇವರು ಕೊಳವೆಬಾವಿ ಕೊರೆಯ ಬೇಕಾಗಿದೆ.
2. ಕಾತರಕಿ	1	1995-96	5.00	0.70	ಸದರಿ ಯೋಜನೆಗೆ ಜಲಮೂಲವು 3:96ರ ತಿಂಗಳಲ್ಲಿ ಆಗಿದ್ದು ಅಂದಾಜು ಪತ್ರಿಕೆಯನ್ನು ತಯಾರಿಸಿ ಅಧೀಕ್ಷಕ ಅಭಿಯಂತರರು, ಜನಾರೋಗ್ಯ ವೃತ್ತ, ಬೆಳಗಾಂ ಇವರಿಗೆ ತಾಂತ್ರಿಕ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಅನುದಾನ ಲಭ್ಯವಿದ್ದಲ್ಲಿ 1997-98ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
2) ಎ.ಆರ್.ಡಬ್ಲ್ಯು.ಎಸ್. (ಕೇಂದ್ರ)					
1. ಸೋಮನಕೊಪ್ಪ	1	1994-95	4.00	2.05	ಸದರಿ ಕೆಲಸಕ್ಕೆ ಟೆಂಡರ್ ಕರೆಯಲಾಗಿತ್ತು. ಗುತ್ತಿಗೆದಾರರು 6:96ರ ತಿಂಗಳಲ್ಲಿ ಕೆಲಸ ಪ್ರಾರಂಭಿಸಿದ್ದಾರೆ. ಇ.ಎಲ್.ಎಸ್.ಆರ್. ನಿರ್ಮಾಣದ ಕೆಲಸ ಮುಗಿಯುವ ಹಂತದಲ್ಲಿದೆ.
2. ಆಲೂರ ಎಸ್ಸ್.ಕೆ.	1	1994-95	4.00	1.53	ಸದರಿ ಕೆಲಸಕ್ಕೆ ಟೆಂಡರ್ ಕರೆಯಲಾಗಿತ್ತು. ಗುತ್ತಿಗೆದಾರರು 6:96ರ ತಿಂಗಳಲ್ಲಿ ಇ.ಎಲ್.ಎಸ್.ಆರ್. ನರ್ಮಾಣದ ಕೆಲಸ ಪ್ರಾರಂಭಿಸಿದ್ದಾರೆ. ಸದರಿ ಕೆಲಸ ಪ್ರಗತಿಯಲ್ಲಿದೆ.

1	2	3	4	5	6
3. ಹಿರೇನಸಬಿ	1	1994-95	3.88	2.79	ಸದರಿ ಕೆಲಸ ಮುಗಿಯುವ ಹಂತದಲ್ಲಿದೆ.
4. ಖಾನಾಪುರ ಎಸ್‌ಕೆ	1	1994-95	4.00	1.68	–ಸದರಿ–
5. ಶಿರಬಡಗಿ	1	1995-96	4.00	3.26	ಸದರಿ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕಾರ ಆದಮೇಲೆ ಕೆಲಸ ಪ್ರಾರಂಭಿಲಾಗುವುದು.
3) ಕಿರುನೀರು ಸರಬರಾಜು ಯೋಜನೆ (ರಾಜ್ಯ) ಸಾಮಾನ್ಯ:					
1. ನವಿಲಹೊಳೆ	1	1994-95	1.30	1.42	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
2. ಕಳಸ	1	1995-96	1.35	1.05	–ಸದರಿ–
3. ವಡವಟ್ಟಿ	1	1995-96	1.30	1.16	–ಸದರಿ–
4. ಮಹಾಕೂಟ	1	1995-96	1.00	1.10	–ಸದರಿ–
5. ಬೂದಿಹಾಳ್ ಎಸ್‌ಜೆ	1	1995-96	1.27	0.33	–ಸದರಿ–
4) ಕಿರುನೀರು ಸರಬರಾಜು ಯೋಜನೆ (ಕೇಂದ್ರ) ಸಾಮಾನ್ಯ:					
1. ಮುಮರೆಡ್ಡಿಕೊಪ್ಪ	1	1995-96	1.51	1.31	ಪೈಪ್‌ಲೈನ್ ಕೆಲಸ ಹಾಗೂ ಸಿಸ್ಟರ್ನ ಕಟ್ಟೆ ಕಟ್ಟುವ ಕೆಲಸ ಪ್ರಗತಿಯಲ್ಲಿದೆ.
2. ಬೆಳ್ಳಿಕಿಂಡಿ	1	1995-96	1.50	0.38	–ಸದರಿ–
3. ನಂದಿಕೇಶ್ವರ ಆಶ್ರಯ ಕಾಲನಿ	1	1995-96	0.75	0.01	ಸಿವಿಲ್ ಕೆಲಸ ಮುಗಿದಿದೆ. ಕೆ.ಇ.ಬಿ. ಕೆಲಸ ಬಾಕಿ ಇದೆ.
5) ಕಿರುನೀರು ಸರಬರಾಜು ವಿಶೇಷ ಘಟಕ ಯೋಜನೆ (ರಾಜ್ಯ)					
1. ಹಲಕುರ್ಕಿ ಹರಿಜನಕೇರಿ	1	1995-96	1.00	0.66	ಜಲಮೂಲ ಸ್ಥಳ ಅಯ್ಕೆ ಆಗಿದೆ. ಕೊಳವೆಬಾವಿ ಕೊರೆಯಬೇಕಾಗಿದೆ.
2. ಕಗಲಗೊಂಬ	1	1995-96	1.00	0.27	ಮಾದಲು ಕೊರೆದ ಕೊಳವೆಬಾವಿ ಜಲಮೂಲದ ನೀರಿನ ಇಳುವರಿ. ಕಡಿಮೆ ಇದೆ ಇನ್ನೊಂದು ಜಲಮೂಲ ಆಗಬೇಕಾಗಿದೆ.